OS No.388/2015
Dw1

ದಿನಾಂಕ 09.06.2026 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದಃ**

ನನಗೆ 42 ವರ್ಷ. ವಾದಿಯು ಸರ್ಕಾರಿ ಸ್ವತ್ತಿಗೆ ಇ-ಖಾತಾ ಮಾಡಿಸಿಕೊಂಡಿರುತ್ತಾರೆ ಎಂದು ನೀವು 2015 ನೇ ಇಸವಿಯಲ್ಲಿ ತಕರಾರು ಎತ್ತಿರುತ್ತೀರಿ ಎಂದರೆ ಇ-ಖಾತಾ ಮಾಡಿಸಿಕೊಂಡಿರುವುದಿಲ್ಲ ಬದಲಾಗಿ ಮ್ಯಾನ್ಯುವಲ್ ಖಾತಾ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ವಿಚಾರವಾಗಿ ನೀವು ಗಲಾಟೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಯಾವಾಗಿನಿಂದ ನೋಡುತ್ತಿದ್ದೀರಿ ಎಂದರೆ ನನ್ನ ತಾತ ತಂದೆಯ ಕಾಲದಿಂದಲೂ ನೋಡುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಸರ್ಕಾರಿ ಜಾಗ ಪಾಳು ಬಿದಿದ್ದು ಸುಮಾರು 20 ವರ್ಷಗಳಿಂದ ನೋಡುತ್ತಿದ್ದೇವೆ ಎಂದು ನುಡಿದಿರುತ್ತಾರೆ. ಸದರಿ ಸರ್ಕಾರಿ ಜಾಗದಲ್ಲಿ ನೀವು ಇರಲಿಲ್ಲ ಎಂದರೆ ಗ್ರಾಮ ಠಾಣಾ ಜಾಗವಾಗಿದ್ದು ದೇವಸ್ಥಾನ, 35 ಮನೆ ಹಾಗೂ ಸ್ಕೂಲ್ ಇರುತ್ತವೆ ಎಂದು ನುಡಿದಿರುತ್ತಾರೆ. ವಾದಿಯು ಅವರ ಜಾಗದಲ್ಲಿ ಸರ್ಕಾರಿ ಶಾಲೆಯನ್ನು ನಿರ್ಮಿಸಿದ್ದು ಸದರಿ ಜಾಗವನ್ನು ಹೊರತು ಪಡಿಸಿ ಉಳಿದ ಸ್ವತ್ತಿಗೆ ವಾದಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ಶಾಲೆ ನಿರ್ಮಿಸಿರುವ ಜಾಗವನ್ನು ದಾನವಾಗಿ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನೀವು ಹಾಗೂ ಉಳಿದ ಪ್ರತಿವಾದಿಗಳು ಒಂದೇ ಕುಟುಂಬದವರಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ನಿಮ್ಮ ಸಂಬಂಧಿಕರಲ್ಲ ಎಂದರೆ ಹಿಂದಿನ ಸಂಬಂಧ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ನನ್ನ ಸಂಬಂಧಿಕರು. ನಿಮ್ಮ ತಂದೆ ಮಾಸಯ್ಯ ರವರನ್ನು ಹೊರತು ಪಡಿಸಿ ಉಳಿದವರ ಜೊತೆ ನೇರ ಸಂಬಂದ ಇರುವುದಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಈ ದಾವೆಯಲ್ಲಿ ಉಳಿದ ಪ್ರತಿವಾದಿಗಳ ಪರ ಸಾಕ್ಷ್ಯ ನುಡಿಯಲು ನಿಮಗೆ ಅಧಿಕಾರ ಇರುವುದಿಲ್ಲ ಎಂದರೆ ಸರ್ಕಾರಿ ಸ್ವತ್ತಾದ ಕಾರಣ ನುಡಿಯುತ್ತಿದ್ದೇನೆ ಎಂದು ನುಡಿದಿರುತ್ತಾರೆ. ಉಳಿದ ಪ್ರತಿವಾದಿಗಳು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ತೊಂದರೆ ಇದೆಯಾ ಎಂದರೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತು ವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಪಂಚಾಯಿತಿಯವರು ವಾದಿಯ ತಾತನ ಕಾಲದಿಂದಲೂ ಸ್ವಾಧೀನ ಇದ್ದ ಬಗ್ಗೆ ತಿಳಿದುಕೊಂಡು ಖಾತೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ಉಳಿದ ಪ್ರತಿವಾದಿಗಳು ವಾದಿಯ ವಿರುದ್ದ ದಾವಾ ಹೂಡಿರುತ್ತಾರೆ ಎಂದರೆ ಸರಿ. ಸದರಿ OS No.535/2018 ರಿಂದ 538/2018 ಆಗಿರುತ್ತದೆ ಎಂದರೆ ಸರಿ. ಸದರಿ ದಾವಾಗಳಲ್ಲಿ ಇರುವ ಸ್ವತ್ತುಗಳು ಹಾಗೂ ಈ

ದಾವೆಯ ದಾವಾ ಸ್ವತ್ತು ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿಯಲ್ಲ. OS No.535/2018 ರಿಂದ 538/2018 ರ ಸ್ವತ್ತುಗಳು ಹಾಗೂ ಈ ದಾವೆಯ ದಾವಾ ಸ್ವತ್ತುಗಳು ಬೇರೆ ಬೇರೆ ಆಗಿರುತ್ತವೆಯಾ ಅಥವಾ ಇಲ್ಲವಾ ಎಂಬ ಬಗ್ಗೆ ನ್ಯಾಯಾಲಯದ ನಿಯೋಗಿಯನ್ನು ನೇಮಿಸಿ ವರದಿ ತರಿಸಿಕೊಳ್ಳಲು ನಿಮ್ಮ ಅಭ್ಯಾಂತರ ಇದೆಯಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದು ಅವರ ಹೆಸರಿಗೆ ಖಾತೆ ಇರುವ ಕಾರಣ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ದಾವಾಹೂಡಿರುವ ಕಾರಣ ನೀವು ಸಹ ಅವರ ಮೇಲೆ ದಾವಾ ಹೂಡಬೇಕೆಂದು ಯಾವುದೆ ವ್ಯಾಜ್ಯಾ ಕಾರಣ ಇಲ್ಲದೆ ಇದ್ದರು ಸಹ OS No.535/2018 ರಿಂದ 538/2018 ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಅಕ್ಟೋಬರ್ 2015 ರಲ್ಲಿ ನೀವು ದಾವಾ ಸ್ವತ್ತಿಗೆ ತಂತಿ ಬೇಲಿ ಹಾಕಲು ಹೋಗಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಕಾರಣಕ್ಕಾಗಿ ವಾದಿಯು ಪೊಲೀಸರಿಗೆ ನಿಮ್ಮ ವಿರುದ್ದ ದೂರನ್ನು ನೀಡಿರುತ್ತಾರೆ ಎಂದರೆ ಅವರು ನಮಗೆ ತೊಂದರೆ ನೀಡಿದಾಗಿ ನಾವು ಸಹ ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ವಾದಿಯು ಪೊಲೀಸರಿಗೆ ನಿಮ್ಮ ವಿರುದ್ದ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿ ಹೊರತು ಪಡಿಸಿ ಬೇರೆ ಯಾರಿಗೂ ಸೇರಿರುವ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಖಾನೇಶುಮಾರಿ ನಂ.9/11, 10/12, 11/13, 15/18, 23/26 ದಾವಾ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**